# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಟಿಪ್ಪಣಿ ಹಾಳೆ

ವಿಷಯ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

| ಪಂಕ್ತಿಯ ಸಂಖ್ಯೆ | ಟಿಪ್ಪಣಿಗಳು ಮತ್ತು ಆಜ್ಞೆಗಳು |
|---|---|
| 123<br><br>124 | ಮಂಡಿಸಿದೆ,<br><br>ವಿಷಯ: Construction of Dialysis center in ward No.13 ಕಾಮಗಾರಿಯ ವರ್ಕ್ ಸ್ಲಿಪ್ ಹಾಗೂ EIRLಗೆ ಅನುಮೋದನೆ ಹಾಗೂ ಕಾಲಾವಧಿ ವಿಸ್ತಾರಣೆ ನೀಡುವ ಬಗ್ಗೆ.<br><br>*********<br><br>ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:-06-02-2019ರಂದು ಮಲ್ಲಸಂದ್ರ ವಾರ್ಡ್ ನಂ.13ರ ವ್ಯಾಪ್ತಿಯಲ್ಲಿ ಕೈಗೊಂಡಿರುವ "Construction of Dialysis center in ward No.13' ಕಾಮಗಾರಿಯನ್ನು ಶ್ರೀ.ಆರ್.ಮಂಜುನಾಥ ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ, ಪಾಲಿಕೆ ಸದಸ್ಯರಾದ ಶ್ರೀ.ಲೋಕೇಶ್, ವಾರ್ಡ್ ನಂ.13 ಹಾಗೂ ಶ್ರೀ.ನರಸಿಂಹನಾಯಕ್, ವಾರ್ಡ್ ನಂ.14 ಹಾಗೂ ಸಂಬಂಧಪಟ್ಟ ಅಭಿಯಂತರೊಡನೆ ಸ್ಥಳ ಪರಿಶೀಲನೆ ನಡೆಸಲಾಯಿತು. ಇದೇ ಸಂಧರ್ಭದಲ್ಲಿ ಸದರಿ ಡಯಾಲಿಸಿಸ್ ಸೆಂಟರ್ ನಿರ್ಮಾಣದ ಜಾಗವು ಪೈಪ್‌ಲೈನ್ ಮುಖ್ಯ ರಸ್ತೆಗೆ ಹೊಂದಿಕೊಂಡಿದ್ದು, ಪಕ್ಕದಲ್ಲಿ ಇಂದಿರಾ ಕ್ಯಾಂಟೀನ್ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬಸ್ ನಿಲ್ದಾಣ ಇದ್ದು, ಸಾರ್ವಜನಿಕರಿಗೆ ಮೂಲಭೂತಸೌಕರ್ಯ ಒದಗಿಸಲು ಡಯಾಲಿಸಿಸ್ ಕೇಂದ್ರ ಹಾಗೂ ಇನ್ನಿತರೆ ಕಛೇರಿಗಳನ್ನು ನಿರ್ಮಿಸಲು ಅನುವಾಗುವಂತೆ ಕಟ್ಟಡದ ಪಾಯವನ್ನು 4-5 ಅಂತಸ್ತುಗಳಿಗೆ ವಿನ್ಯಾಸಗೊಳಿಸಿ ನಿರ್ಮಿಸುವಂತೆ ಶ್ರೀ.ಆರ್.ಮಂಜುನಾಥ ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ, ಪಾಲಿಕೆ ಸದಸ್ಯರಾದ ಶ್ರೀ.ಲೋಕೇಶ್, ವಾರ್ಡ್ ನಂ.13 ಹಾಗೂ ಶ್ರೀ.ನರಸಿಂಹನಾಯಕ್, ವಾರ್ಡ್ ನಂ.14 ರವರುಗಳು ಕೋರಿರುವಂತೆ ಐದು ಮಹಡಿಗಳ ಕಟ್ಟಡಕ್ಕೆ ವಿನ್ಯಾಸವನ್ನು ಆಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸುವಂತೆ ಮುಖ್ಯ ಅಭಿಯಂತರರರು ತಮ್ಮ ಪರಿವೀಕ್ಷಣಾ ವರದಿಯಲ್ಲಿ ಸೂಚಿಸಿರುತ್ತಾರೆ.<br><br>ಮುಂದುವರೆದಂತೆ ಮುಖ್ಯ ಅಭಿಯಂತರರ ಪರಿವೀಕ್ಷಣಾ ವರದಿಯಲ್ಲಿ ಸೂಚಿಸಿರುವಂತೆ, ಐದು ಮಹಡಿಗಳ ಕಟ್ಟಡಕ್ಕೆ ವಿನ್ಯಾಸವನ್ನು ಆಳವಡಿಸಿಕೊಂಡು ಶ್ರೀ.ಆರ್.ಮಂಜುನಾಥ ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ, ಪಾಲಿಕೆ ಸದಸ್ಯರಾದ ಶ್ರೀ.ಲೋಕೇಶ್, ವಾರ್ಡ್ ನಂ.13 ಹಾಗೂ ಶ್ರೀ.ನರಸಿಂಹನಾಯಕ್, ವಾರ್ಡ್ ನಂ.14 ರವರುಗಳು ಕೋರಿರುವಂತೆ ಐದು ಮಹಡಿಗಳ ಕಟ್ಟಡಕ್ಕೆ ವಿನ್ಯಾಸವನ್ನು ಆಳವಡಿಸಿಕೊಂಡು ನಿರ್ವಹಿಸಬೇಕಾಗಿರುತ್ತದೆ. ಮೂಲ ಅಂದಾಜು ಪಟ್ಟಿಯಲ್ಲಿ ಐದು ಮಹಡಿಗಳ ಕಟ್ಟಡ ನಿರ್ಮಾಣ ಮಾಡುವ ಪರಿಮಾಣಗಳು ಇರುವುದಿಲ್ಲ. ಆದ ಕಾರಣ ಲಭ್ಯವಿರುವ ಕರಾರು ಮೊತ್ತದಲ್ಲೇ ಕಾಮಗಾರಿ ನಿರ್ವಹಿಸಬೇಕಾಗಿರುತ್ತದೆ. ಆದ್ದರಿಂದ ನೆಲಮಹಡಿ ಸ್ಥಿತಿಗೆ ಡಯಾಲಿಸಿಸ್ ಕೇಂದ್ರ ಕಟ್ಟಡವನ್ನು ಪೂರ್ಣಗೊಳಿಸುವ ಅವಶ್ಯಕತೆ ಇರುತ್ತದೆ. ಸದರಿ ಕಟ್ಟಡವನ್ನು ಮಣ್ಣುಗೆಲಸ ಮಾಡುವ ಸಂಧರ್ಭದಲ್ಲಿ ಸಾಫ್ಟ್‌ರಾಕ್ ಕಂಡು ಬಂದ ಹಿನ್ನೆಲೆಯಲ್ಲಿ ಸಾಫ್ಟ್‌ರಾಕ್ ತೆಗೆದು ಕಾಮಗಾರಿ ಮಣ್ಣುಗೆಲಸ |

ಪು.ತಿ.ನೋ

| ಪಂಕ್ತಿಯ ಸಂಖ್ಯೆ | ಟಿಪ್ಪಣಿಗಳು ಮತ್ತು ಆಜ್ಞೆಗಳು |
|---|---|

ನಿರ್ವಹಿಸಲಾಯಿತು. ತದ ನಂತರ ನೆಲ ಮಹಡಿ ನಿರ್ಮಾಣ ಮಾಡುವ ಹಿನ್ನೆಲೆಯಲ್ಲಿ ಕಟ್ಟಡದ ಸುತ್ತ ಆರ್‌ಸಿಸಿ ತಡೆಗೋಡೆಯನ್ನು ನಿರ್ಮಿಸಲಾಗಿರುತ್ತದೆ. ಕಾಮಗಾರಿ ನಿರ್ವಹಿಸಲು ನೀರಿನ ಅವಶ್ಯಕತೆ ಇರುವುದರಿಂದ ಬೋರ್‌ವೆಲ್ ಕೋರೆದು ಪಂಪ್‌ಮೋಟರ್ ಆಳವಡಿಸಲಾಗಿರುತ್ತದೆ. ಈ ಮೇಲಿನ ಅಂಶಗಳು ಹೆಚ್ಚುವರಿಯಾಗಿರುತ್ತದೆ. ಮುಂದುವರೆದಂತೆ, ನೆಲ ಸಮತಟ್ಟು ಮಾಡುವುದು, ಕಾಂಪೌಂಡ್‌ಗೋಡೆ ನಿರ್ಮಿಸುವುದು, ಕಲ್ಲು ಕಟ್ಟಡ ನಿರ್ಮಾಣ ಮಾಡುವುದು, ಟೆರೆಸ್ ವಾಟರ್ ಪ್ರೂಪಿಂಗ್ ಮಾಡುವ ಅಂಶಗಳು ಹಾಗೂ ಇನ್ನೀತರೆ ಅಂಶಗಳು ಉಳಿತಾಯವಾಗಿರುತ್ತವೆ. ಸದರಿ ಅಂಶ ಮತ್ತು ಪರಿಮಾಣಗಳನ್ನು ಆಳವಡಿಸಿಕೊಂಡು ಯೋಜನಾ ಸಮಾಲೋಚಕರು ವರ್ಕ್ ಸ್ಲಿಪ್ ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮಂಜೂರಾದ ಅಂದಾಜು ಪಟ್ಟಿಯ ಕೆಲವೊಂದು ಅಂಶಗಳಲ್ಲಿನ ಪರಿಮಾಣಗಳು ಮತ್ತು ಅಂಶಗಳು ಹೆಚ್ಚುವರಿಯಾಗಿದ್ದು, ಹೆಚ್ಚುವರಿ ಪರಿಮಾಣ ಮತ್ತು ಅಂಶಗಳನ್ನು ಆಳವಡಿಸಿಕೊಂಡು, ಮಂಜೂರಾಗಿರುವ ಟೆಂಡರ್ ಮೊತ್ತದ ಉಳಿತಾಯದಲ್ಲಿ ಭರಿಸಿಕೊಂಡು **Workslip,** ಮತ್ತು ಮಾರ್ಪಾಡು ಅಂದಾಜು ಪಟ್ಟಿಯನ್ನು ತಯಾರಿಸಿ, ಪಾಲಿಕೆಗೆ ಯಾವುದೇ ಹೆಚ್ಚಿನ ಆರ್ಥಿಕ ವೆಚ್ಚವಾಗದಿರುವುದರಿಂದ **Workslip** ಮೊತ್ತ ರೂ.42,99,294,54/- ಗಳಿಗೆ **Workslip** ಹಾಗೂ ರೂ.16,47,191,06 ಗಳಿಗೆ **EIRL** ತಯಾರಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ವಿವರಗಳು ಈ ಕೆಳಕಂಡಂತೆ ಇರುತ್ತವೆ.

| **Abstract of work slip** | |
|---|---|
| Estimated Amount | 1,50,00,000/– |
| Amount put to Tender | 1,39,49,505.50 |
| Approved Tender amount @ % | 1,54,83,951.62 (+11%) |
| Amount as per Execution | 1,54,82,128.86/– |
| (a) Quantity upto 125% | 1,09,16,295.23/– |
| (b) Quantity above 125% | 29,18,642.57/– |
| (c) EIRL amount | 16,47,191.06 |
| Total amount as per execution (a+b+c) | 1,54,82,128.86/– |
| Amount of Savings/Excess Compare to amount put Tender = (Amount as per work order- Amount as per execution) | 1822.76/– |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

| ಪಂಕ್ತಿಯ ಸಂಖ್ಯೆ | ಟಿಪ್ಪಣಿಗಳು ಮತ್ತು ಆಜ್ಞೆಗಳು |
|---|---|
| 128 | ಆದ್ದರಿಂದ ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯು ರೂ.42,99,[illegible]- ಗಳಿಗೆ Workslip ಹಾಗೂ ರೂ.16,47,191.06 ಗಳಿಗೆ EIRL ತಯಾರಿಸಿ ಮಂಜೂರಾದ ಟೆಂಡರ್ ಮೊತ್ತದ ಮಿತಿಯಲ್ಲಿರುತ್ತದೆ ಪಾಲಿಕೆಗೆ ಯಾವುದೇ ಹೆಚ್ಚಿನ ಆರ್ಥಿಕ ಹೊರೆಯಾಗಿರುವುದಿಲ್ಲ.<br><br>ಸದರಿ ಕಾಮಗಾರಿ ನಿರ್ವಹಿಸುವ ಸಂಧರ್ಭದಲ್ಲಿ ವರ್ಕ್ ಸ್ಲಿಪ್‌ಗೆ ಸಂಬಂಧ ಪಟ್ಟಂತೆ ಹೆಚ್ಚುವರಿಯಾದ ಪರಿಮಾಣಗಳು Earth work in Softrock without blasting, M25, Centring & Shuttering, Borewell, Solid blocks, TMT & etc., ಮೇಲಿನ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ ಕರಾರು ಮೊತ್ತಕ್ಕೆ ಹೆಚ್ಚುವರಿಯಾಗದಂತೆ Workslip ಹಾಗೂ EIRL ತಯಾರಿಸಿ ಅನುಮೋದನೆ ನೀಡುವ ಬಗ್ಗೆ ಮುಂದಿನ ಕ್ರಮಕ್ಕಾಗಿ ಕಡತವನ್ನು ಮಂಡಿಸಿದೆ.<br><br>ಸಹಾಯಕ ಅಭಿಯಂತರರು<br><br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಯೋಜನಾ ವಿಭಾಗ, |
| (129) | ಕಾರ್ಯಪಾಲಕ ಅಭಿಯಂತರರು(ಯೋಜನೆ)<br><br>ಈ ಕಡತ ಸಂಖ್ಯೆ 124 ರಿಂದ 128 ರ ವರೆಗಿನ ಬರಹಗಳನ್ನು ಅವಲೋಕಿಸಲಾಗಿದೆ. ಯಾವುದೇ ಹೆಚ್ಚಿನ ಆರ್ಥಿಕ ಹೊರೆಯಿಲ್ಲದಿರುವುದರಿಂದ ಸದರಿ ಕಾಮಗಾರಿಯನ್ನು EIRL ತಯಾರಿಸಿ ಮಂಜೂರಾತಿಗೆ ಕಳುಹಿಸಿಕೊಡಲಾಗಿದೆ.<br><br>EXECUTIVE ENGINEER (Project)<br>Project Division<br>Bruhat Bangalore Mahanagara Palike<br>Dasarahalli Zone, Bangalore-73. |
| (130) | ಆಯು.ಆ.(ಪ.ಪ) |

ಪು.ತಿ.ನೋ

| ಪಂಕ್ತಿಯ ಸಂಖ್ಯೆ | ಟಿಪ್ಪಣಿಗಳು ಮತ್ತು ಆಜ್ಞೆಗಳು |
|---|---|

**ಮಂಡಿಸಿದೆ,**

ಕಂಡಿಕೆ (01) ರಿಂದ (129) ರವರೆಗಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಕಂಡಿಕೆ (129) ರಲ್ಲಿ ಕಾರ್ಯಪಾಲಕ ಅಭಿಯಂತರರು (ಯೋಜನಾ) ವಿಭಾಗ ರವರು "Construction of Dialysis center in Ward no. 13" ಕಾಮಗಾರಿಯ **Workslip, EIRL &** ಮಾರ್ಪಾಡಿತ ಅಂದಾಜು ಪಟ್ಟಿಗೆ ಅನುಮೋದನೆ ಕೋರಿ ಕಡತವನ್ನು ಸಲ್ಲಿಸಿದ್ದು, ದಿನಾಂಕ: 06.02.2019 ರಂದು ಮುಖ್ಯ ಅಭಿಯಂತರರು (ದಾಸರಹಳ್ಳಿ) ವಲಯ ರವರ ಸ್ಥಳ ಪರಿಶೀಲನಾ ವರದಿ ಲಗತ್ತಿಸಿದ್ದು, ಈ ಬಗ್ಗೆ ಮುಖ್ಯ ಅಭಿಯಂತರರು ಸ್ಥಳ ಪರಿವೀಕ್ಷಣೆ ವರದಿಯಲ್ಲಿ ಅನುಮತಿ ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ನಿರ್ವಹಿಸುವಲ್ಲಿ ಸ್ಥಳದಲ್ಲಿನ ಅವಶ್ಯಕತೆಗೆ ತಕ್ಕಂತೆ ಅಗತ್ಯ ಮಾರ್ಪಾಡುಗಳನ್ನು ಮಾಡಿಕೊಂಡು ಕಾಮಗಾರಿ ನಿರ್ವಹಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸ್ಥಳ ಪರಿಶೀಲನಾ ಸಮಯದಲ್ಲಿ ಶ್ರೀ. ಮಂಜುನಾಥ್ ಆರ್, ಮಾನ್ಯ ಶಾಸಕರು ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ, ಹಾಗೂ ಪಾಲಿಕೆ ಸದಸ್ಯರಾದ ಶ್ರೀ. ಲೋಕೇಶ್ ಎನ್, ವಾರ್ಡ್ ನಂ 13 ಹಾಗೂ ಶ್ರೀ ನರಸಿಂಹನಾಯ್ಕ್, ವಾರ್ಡ್ ನಂ. 14 ಹಾಗೂ ಸಂಬಂಧಪಟ್ಟ ಅಭಿಯಂತರರು ಹಾಜರಿದ್ದು, ಸದರಿ Dialysis center ನಿರ್ಮಾಣದ ಜಾಗವು ಪೈಪ್ ಲೈನ್ ಮುಖ್ಯ ರಸ್ತೆಗೆ ಹೊಂದಿಕೊಂಡಿದ್ದು, ಪಕ್ಕದಲ್ಲಿ ಇಂದಿರಾ ಕ್ಯಾಂಟೀನ್ ಹಾಗೂ ಬೃಹತ್ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬಸ್ ನಿಲ್ದಾಣ ಇದ್ದು, ಸಾರ್ವಜನಿಕರಿಗೆ ಮೂಲಭೂತ ಸೌಕರ್ಯ ಒದಗಿಸಲು ಡಯಾಲಿಸಿಸ್ ಕೇಂದ್ರ ಹಾಗೂ ಇತರೆ ಕಛೇರಿಗಳನ್ನು ನಿರ್ಮಿಸಲು ಅನುವಾಗುವಂತೆ ಕಟ್ಟಡದ ಪಾಯವನ್ನು 4–5 ಅಂತಸ್ತುಗಳಿಗೆ ವಿನ್ಯಾಸಗೊಳಿಸಿ ನಿರ್ಮಿಸುವಂತೆ ಸ್ಥಳ ಪರಿಶೀಲನಾ ಸಮಯದಲ್ಲಿ ಶ್ರೀ. ಮಂಜುನಾಥ್ ಆರ್, ಮಾನ್ಯ ಶಾಸಕರು ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ, ಹಾಗೂ ಪಾಲಿಕೆ ಸದಸ್ಯರಾದ ಶ್ರೀ. ಲೋಕೇಶ್ ಎನ್, ವಾರ್ಡ್ ನಂ 13 ಹಾಗೂ ಶ್ರೀ ನರಸಿಂಹನಾಯ್ಕ್, ವಾರ್ಡ್ ನಂ. 14 ರವರುಗಳಿ ಕೋರಿರುವಂತೆ 5 ಮಹಡಿಗಳ ವಿನ್ಯಾಸವನ್ನು ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸುವಂತೆ ಮುಖ್ಯ ಅಭಿಯಂತರರು ತಮ್ಮ ಸ್ಥಳ ಪರಿವೀಕಣಾ ಸಮಯದಲ್ಲಿ ಸೂಚಿಸಿರುತ್ತಾರೆ. ಅದರಂತೆ, ಸದರಿ ಕಾಮಗಾರಿಯ ಮಂಜೂರಾದ ಪರಿಮಾಣಗಳಲ್ಲಿ ಉಳಿತಾಯವಾಗುವ ಮೊತ್ತದಲ್ಲಿ ಮಾನ್ಯ ಶಾಸಕರು ಹಾಗೂ ಪಾಲಿಕೆ ಸದಸ್ಯರು ಕೋರಿರುವಂತೆ ಸ್ಥಳಕ್ಕೆ ಅನುಗುಣವಾಗಿ ಅವಶ್ಯವಿರುವ ಅಂಶಗಳನ್ನು ಅಳವಡಿಸಿಕೊಂಡು ಕಾಮಗಾರಿ ನಿರ್ವಹಿಸಲು ಹಾಗೂ ಅಗತ್ಯ ಮಾರ್ಪಾಡುಗಳನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸುವಲ್ಲಿ ಹಾಗೂ ಅಂದಾಜುಪಟ್ಟಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ಕಾಮಗಾರಿ ನಿರ್ವಹಿಸುವುದು ಅಗತ್ಯವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

**<u>ಕಾಮಗಾರಿಯ ಒಟ್ಟು ವಿವರಗಳು ಕೆಳಕಂಡಂತಿರುತ್ತವೆ</u>.**

| | | |
|---|---|---|
| 1 | ಕಾಮಗಾರಿಯ ಅಂದಾಜು ಮೊತ್ತ | ರೂ. 1,50,00,000/– |
| 2 | ಅನುಮೋದಿತ ಮೊತ್ತ | ರೂ. 1,54,83,951.62/– |
| 3 | ಕಾಮಗಾರಿ ಪೂರ್ಣಗೊಳಿಸಿದ ದಿನಾಂಕ/ ಪೂರ್ಣಗೊಳಿಸಲು ನಿಗಧಿತ ದಿನಾಂಕ | ನಿಗಧಿ ಪಡಿಸಿದ ಅವಧಿ 120 ದಿನಗಳು |
| 4 | ಮಾರ್ಪಾಡಿತ ಕಾಮಗಾರಿಯ ಅಂದಾಜು ಮೊತ್ತ | ರೂ. 1,54,82,128.86/– |

ಮೇಲ್ಕಂಡಂತೆ ಕಾರ್ಯಪಾಲಕ ಅಭಿಯಂತರರು (ಯೋಜನಾ) ವಿಭಾಗ ರವರು ಸದರಿ ಕಾಮಗಾರಿಯನ್ನು ನಿರ್ವಹಿಸುವಲ್ಲಿ ವರ್ಕ್ ಸ್ಲಿಪ್ ಮೊತ್ತ ರೂ. 42,99,294.54/– ಗಳಾಗಿದ್ದು ಹಾಗೂ ಇ.ಐ.ಆರ್.ಎಲ್ ಮೊತ್ತ ರೂ. 16,47,191.06/– ಕಾಮಗಾರಿಯಲ್ಲಿನ ಕೆಲವು ಅಂಶಗಳನ್ನು ಸ್ಥಳದ ಅಗತ್ಯತೆಗೆ ಅನುಗುಣವಾಗಿ ನಿರ್ವಹಿಸಿ ಮಾರ್ಪಾಡಿತ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಕಾಮಗಾರಿಯ ಮಾರ್ಪಾಡಿತ ಅಂದಾಜು ಮೊತ್ತ **ರೂ. 1,54,82,128.86/–**ಗಳಾಗಿರುತ್ತವೆ. ಸದರಿ ಕಾಮಗಾರಿಯ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

| ಪಂಕ್ತಿಯ ಸಂಖ್ಯೆ | ಟಿಪ್ಪಣಿಗಳು ಮತ್ತು ಆಜ್ಞೆಗಳು |
|---|---|
| 134 | ಮಾರ್ಪಾಡಿತ ಅಂದಾಜು ಮೊತ್ತವು ಮಂಜೂರಾದ ಅಂದಾಜು ಮೊತ್ತದ ಮಿತಿಯಲ್ಲಿ ಇದ್ದು, ಪಾಲಿಕೆಗೆ ರೂ. **1822.76/-**ಗಳಷ್ಟು ಉಳಿತಾಯವಾಗುತ್ತದೆ. ಆದ್ದರಿಂದ ಮಾನ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ:ಬಿ12(1)/ಪಿಆರ್/394/18-19, ದಿನಾಂಕ: 04.10.2018 ರ ರೀತ್ಯಾ 1(D) ರನ್ವಯ(Revised and Supplemental estimates of Original Estmates- Upto 15% over the Original Estimates or to a Maximum of Rs 100.00 lakhs Whichever is less) ವಲಯದ ಮುಖ್ಯ ಅಭಿಯಂತರ ರವರೆ ಮಾರ್ಪಾಡಿತ/ಪರಿಷ್ಕೃತ ಅಂದಾಜು ಪಟ್ಟಿಗೆ ಅನುಮೋದನೆ ನೀಡಬಹುದಾಗಿರುತ್ತದೆ. ಸದರಿ ಮಾರ್ಪಾಡಿತ ಅಂದಾಜು ಪಟ್ಟಿ ಮೊತ್ತವು ಅನುಮೋದಿತ ಟೆಂಡರ್ ಮೊತ್ತದ ಮಿತಿಯಲ್ಲಿದ್ದು, ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲವೆಂದು ತಿಳಿಸುತ್ತಾ, ಮಾರ್ಪಾಡಿತ ಅಂದಾಜು ಪಟ್ಟಿಗೆ ಮಂಜೂರಾತಿ ನೀಡಬಹುದಾಗಿರುತ್ತದೆ ಹಾಗೂ **ಮಾರ್ಪಾಡಿತ ಬಿಒಕ್ಯೂ ಸಿದ್ಧಪಡಿಸಿ ಗುತ್ತಿಗೆದಾರರಿಗೆ ನೀಡಲು ಕಾ.ಪಾ.ಅ (ಯೋಜನಾ) ವಿಭಾಗ** ರವರಿಗೆ ಸೂಚಿಸಬಹುದಾಗಿರುತ್ತದೆ ಎಂದು ಅಭಿಪ್ರಾಯಿಸಿ ಕಡತವನ್ನು ಮಂಡಿಸಿದೆ.<br><br>ತಾಂತ್ರಿಕ ಸಹಾಯಕರು |
| 135 | ಮುಖ್ಯ ಅಭಿಯಂತರರು (ದಾ.ವ)<br>Discussed with the executive engineer and inspection note is given to submit the modified estimate as per the site condition. Accordingly the modified estimate is approved<br><br>ಮುಖ್ಯ ಅಭಿಯಂತರರು<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ<br>ದಾಸರಹಳ್ಳಿ ವಲಯ, ಬೆಂಗಳೂರು |
| 136 | ಅನುಮತಿ ಕೋರಿದೆ<br><br>ಅನುಮತಿ ಕೋರಿದೆ |
| 137 | ಕಿ.ಕ(ಯೋಜನೆ) |

ಪು.ತಿ.ನೋ